ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/23/2015–16** ದಿ. 19.5.2016

---

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

---

| ವಾದಿಗಳು | ಪ್ರತಿವಾದಿಗಳು |
|---|---|
| 3) ಶ್ರೀಮತಿ ಕುಣಿಕೇರಿ ಬಸವ್ವ<br>ಗಂಡ ದಿ॥ ಕುಣಿಕೇರಿ ಶಿವಯೋಗಪ್ಪ<br>ಗ್ರಾಮ : ಹನುಮಗೊಂಡನಹಳ್ಳಿ. | 1) ಕಂದಾಯ ನಿರೀಕ್ಷಕರು<br>ಹಂಪಸಾಗರ ಹೋಬಳಿ |

---

ವಿಷಯ : – **ಹಗರಿಬೊಮ್ಮನಹಳ್ಳಿ ತಾಲೂಕು ಹನುಮಗೊಂಡನಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 91 ವಿಸ್ತೀರ್ಣ 6–03 ಎಕರೆ ಜಮೀನು ಪವತಿ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು –ವಿಚಾರಣೆ.**

---

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಹನುಮಗೊಂಡನಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 91 ವಿಸ್ತೀರ್ಣ 6–03 ಎಕರೆ ಜಮೀನು ವಾದಿಗಳ ಪವತಿ ಹಕ್ಕು ಬದಲಾವಣೆ ಮಾಡಿಕೊಳ್ಳಲು ನಿಗದಿತ ನಮೂನೆಯಲ್ಲಿ ಭೂಮಿಕೇಂದ್ರ ಹಗರಿಬೊಮ್ಮನಹಳ್ಳಿಯಲ್ಲಿ ಅರ್ಜಿ ಮಾಡಿಕೊಂಡಿದ್ದು ಸದರಿ ಅರ್ಜಿಯು ವಹಿವಾಟು ಸಂಖ್ಯೆ 104 ಹಕ್ಕು ಬದಲಾವಣೆ ಸಂಖ್ಯೆ ಹೆಚ್. 40/2015–16 ರಂತೆ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿದೆ. ಸದರಿ ನೋಟೀಸುಗಳನ್ನು ಗ್ರಾಮ ಲೆಕ್ಕಾಧಿಕಾರಿ ಹನುಮಗೊಂಡನಹಳ್ಳಿ ಇವರು ಜಾರಿ ಮಾಡಿರುತ್ತಾರೆ. ಹಾಗೂ ಗ್ರಾಮ ಲೆಕ್ಕಾಧಿಕಾರಿ ಹನುಮಗೊಂಡನಹಳ್ಳಿ ಇವರು ಹಾಲೀ ಪಹಣಿ ದಾಖಲು ಪವತಿದಾರರು ಪಹಣಿಯಲ್ಲಿ ಕುಣಿಕೇರಿ ಶಿವಯೋಪ್ಪರ ಮೈನರ್ ಗಾರ್ಡಿಯನ್ ದೇವೀರವ್ವ ಅಂತ ಇದ್ದು ಇವರ ವಂಶವೃಕ್ಷ ಸಲ್ಲಿಸಿಲ್ಲವೆಂದು ಈ ವರದಿ ಮಾಡಿರುತ್ತಾರೆ. ಸದರಿ ವರದಿಯನ್ನಾಧರಿಸುತ್ತಾ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಹಾಗೂ ಪ್ರಕರಣಕ್ಕೆ ವಾದಿಯು ತಕರಾರು ಸ್ವೀಕೃತಿ ಸಂಖ್ಯೆ 9137/15–16 ರಂತೆಯು ತಕರಾರು ದಾಖಲಿಸಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಪ್ರಕರಣವನ್ನು ಈ ನ್ಯಾಯಾಲಯದಲ್ಲಿ ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ಪ್ರಕರಣವನ್ನು ದಿನಾಂಕ: 15–10–2015 ರಿಂದ 19–05–2016 ರವರೆಗೆ

ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿಗಳು ಸತತವಾಗಿ ಗೈರು ಹಾಜರಾಗಿರುತ್ತಾರೆ. ಹಾಗೂ ಪವತಿ ಖಾತೆ ಬದಲಾವಣೆ ಸಂಬಂಧಿಸಿದ ಅತಿ ಮುಖ್ಯವಾದ ವಂಶವೃಕ್ಷ ಸಲ್ಲಿಸುವಲ್ಲಿ ವಿಫಲರಾಗಿರುತ್ತಾರೆ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ವರದಿ ಹಾಗೂ ಕಂದಾಯ ನಿರೀಕ್ಷರ ವರದಿಯನ್ನಾಧರಿಸಿ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಹನುಮಗೊಂಡನಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 91 ವಿಸ್ತೀರ್ಣ 6-03 ಎಕರೆ ಜಮೀನಿನ ಪವತಿ ಹಕ್ಕು ಬದಲಾವಣೆ ಅರ್ಜಿಯನ್ನು ವಜಾ ಮಾಡಿ ಆದೇಶಿಸಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :-
1) ವಾದಿ + ಪ್ರತಿವಾದಿಗಳು
2) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ